11–00 AM

ಸಂತಾಪ ಸೂಚನೆ

ವಿಷಯ: ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಕೆ.ಆರ್. ತಿಮ್ಮರಾಯಪ್ಪರವರ ನಿಧನದ ಬಗ್ಗೆ.

ಅಧ್ಯಕ್ಷರು: ಇಲ್ಲಿ ಒಂದು ಸಂತಾಪ ಸೂಚನೆ ಪ್ರಕಟಣೆ ಇದೆ. ಮಾಜಿ ಶಾಸಕರಾದ ಶ್ರೀ ಕೆ.ಆರ್. ತಿಮ್ಮರಾಯಪ್ಪ ಅವರು ನಿಧನಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ. ವಿಧಾನ ಸಭೆಯ ಮಾಜಿ ಶಾಸಕರಾಗಿದ್ದ ಶ್ರೀ ಕೆ.ಆರ್.ತಿಮ್ಮರಾಯಪ್ಪನವರು ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಕೊಟ್ಟೂರು ಗ್ರಾಮದಲ್ಲಿ ಜನಿಸಿದ್ದು, ಕೃಷಿಕರಾಗಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಶ್ರೀಯುತರು ಐದನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ದಿನಾಂಕ 29–07–2008 ರಂದು ನಿಧನ ಹೊಂದಿದರು.

ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸದನದಲ್ಲಿದ್ದ ಎಲ್ಲಾ ಮಾನ್ಯ ಸದಸ್ಯರು ಎದ್ದು ಒಂದು ನಿಮಿಷ ಮೌನವನ್ನು ಆಚರಿಸಿದರು.)

2.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:–

ವಿಷಯ: ದಿನಾಂಕ 29–07–2008ರಂದು ವಿಧಾನಸಭೆಯಲ್ಲಿ ನಡೆದ ಅಹಿತಕರ ಘಟನೆ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ಎಲ್ಲಾ ಸದಸ್ಯರು ತಮ್ಮ ಕೊಠಡಿಗೆ ಬಂದು ನಿನ್ನೆ ಇಲ್ಲಿ ನಡೆದಂಥ ಒಂದು ಅಹಿತಕರ ಘಟನೆ ಬಗ್ಗೆ ತಮಗೆ ವಿವರವಾಗಿ ತಿಳಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ತಮ್ಮ ಜೊತೆಯಲ್ಲಿದ್ದರು. ನಿನ್ನೆ ನಡೆದಂಥ ಘಟನೆಯ ಬಗ್ಗೆ ನಮಗೆಲ್ಲರಿಗೂ ನೋವು ಅಷ್ಟೇ ಅಲ್ಲ, ಈ ಸದನದ ಘನತೆ ಮತ್ತು ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಡೆದಿದೆ ಎಂದರೆ ಅದು ಅತಿಶಯೋಕ್ತಿಯಲ್ಲ. ಅನೇಕ ಸಾರಿ ನಾವು ಮಾತನಾಡುವಾಗ ಡೆಮಾಕ್ರಸಿಯಲ್ಲಿ ಉತ್ತರ ಪ್ರತ್ಯುತ್ತರ ಕೊಡುತ್ತಿರುತ್ತೇವೆ, ಮತ್ತು ಅದೇ ರೀತಿಯಿಂದ ಮಾತನಾಡುತ್ತೇವೆ. ಕೆಲವು ಸಲ humorous ಆಗಿ ಮಾತನಾಡುತ್ತೇವೆ, ಕೆಲವು ಸಲ ಕಠಿಣವಾಗಿ ಮಾತನಾಡುತ್ತೇವೆ. ಏನೇ ಮಾತನಾಡಿದರೂ ನಮ್ಮ ನಮ್ಮ ಇತಿಮಿತಿಯಲ್ಲಿಟ್ಟುಕೊಂಡು ಮಾತನಾಡುತ್ತೇವೆ.

ಆದರೆ, ಯಾಕೋ ಏನೋ ಗೊತ್ತಾಗಲಿಲ್ಲ. ಮಾನ್ಯ ಇಂಧನ ಸಚಿವರು ಏಕಾಏಕಿ, ಪ್ರೊಸೀಡಿಂಗ್ಸ್‌ನಲ್ಲಿ ತೆಗೆದು ಹಾಕಿದ್ದು ಏನೆಂದು ಕೇಳಿದಾಗ "ನೀವೆಲ್ಲರೂ ಬೊಗಳಿದ್ದು ತೆಗೆದು ಹಾಕಿ ಎಂದು ಹೇಳಿದ್ದೇವೆ" ಎಂದರು. ಅದು ನಮ್ಮೆಲ್ಲರಿಗೂ ನಿಜವಾಗಲೂ ನೋವಾಗಿದೆ. ಈ ಸದನದ ಗೌರವವನ್ನು ಕಾಪಾಡತಕ್ಕಂಥ ಒಂದು ವಿಶೇಷವಾದ ಹಕ್ಕು ಮತ್ತು ಅಥಾರಿಟಿ ನಿಮಗೆ ಇದೆ. ಮತ್ತು ನಮ್ಮೆಲ್ಲರ ಗೌರವ ಕಾಪಾಡಿ, ನಮಗೆ ನೋವು ಆಗದ ರೀತಿಯಲ್ಲಿ ತೆಗೆದುಕೊಂಡು ಹೋಗತಕ್ಕಂಥ ಜವಾಬ್ದಾರಿ ಕೂಡ ತಮ್ಮ ಮೇಲೆ ಇದೆ. ಅಷ್ಟೆ ಜವಾಬ್ದಾರಿ ನಮ್ಮ ಮೇಲೆ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದು ಏಕೆ ಬಂತೋ, ಏನು ಬಂತೋ ನನಗಂತೂ ಅರ್ಥವಾಗುತ್ತಿಲ್ಲ. ಅದರಿಂದ ಖಂಡಿತವಾಗಿ ನಮಗೆ ನೋವಾಗಿದೆ ಮತ್ತು ನಮ್ಮ ಎಲ್ಲಾ ಸದಸ್ಯರು ಬಹಳ agitated ಮೂಡ್‌ನಲ್ಲಿದ್ದರು. ನಾನು ಅವರಿಗೆ ಸಮಾಧಾನಪಡಿಸಿ ತಮ್ಮ ಚೇಂಬರ್‌ಗೆ ಕರೆದುಕೊಂಡು ಹೋಗಿ ಕೇಳೋಣ, ನಾವು ಈ ರೀತಿ ಕೇಳಿದ ಮೇಲೂ ಅವರು ಅದಕ್ಕೆ ಸರಿಯಾಗಿ ಸ್ಪಂದಿಸಲಿಲ್ಲವೆಂದರೆ ಮುಂದಿನ ಹೆಜ್ಜೆಯನ್ನು ನಾವು ಇಡೋಣ, ಎಂದು ಹೇಳಿದೆ. ಏಕೆಂದರೆ, ನಮ್ಮ ಮೇಲೆ ಅಪಾದನೆ ಬರುವುದು ಬೇಡ. ಪ್ರೋಸಿಡಿಂಗ್ಸ್‌ಗೆ ಪ್ರಿವೆಂಟ್ ಮಾಡಿದರು, ಒಳ್ಳೆಯ ರೀತಿಯ ಬಜೆಟ್ ಚರ್ಚೆ ನಡೆದಿತ್ತು ಇವರೆಲ್ಲಾ ಅಡ್ಡಗಾಲು ಹಾಕಿದರು, ಯಡಿಯೂರಪ್ಪನವರು ಅದಕ್ಕೆ ಉತ್ತರ ಕೊಡುತ್ತಿದ್ದರು, ಇವರು ಬೇಕೆಂದೆ ನಿಲ್ಲಿಸಿದರು, ಈ ಅಪಾದನೆಯನ್ನು ನಾವು ಹೊತ್ತುಕೊಳ್ಳುವುದಕ್ಕೆ ತಯಾರಿಲ್ಲ. ಅದಕ್ಕಾಗಿ ನಾವು ತಮಗೆ ಮನವಿ ಮಾಡಿಕೊಳ್ಳೋಣ ಎಂದು ನಾನು ಮತ್ತು ಸುಮಾರು 30–35 ಜನ ಬಂದು ನಿಮ್ಮನ್ನು ಭೇಟಿಯಾದೆವು. ಅವರು ಈ ಸದನಕ್ಕೆ ಗೌರವದಿಂದ ಕ್ಷಮೆ ಕೇಳಿಕೊಂಡರೆ ಅವರಿಗೇನು ಇರುವ ಗೌರವ ಕಡಿಮೆಯಾಗುವುದಿಲ್ಲ. ಏನೋ emotion ನಲ್ಲಿ ಹೇಳಿದ್ದೇವೆ ಎಂದು ಹೇಳಿದರೂ ನಮಗೇನೂ ತೊಂದರೆಯಿಲ್ಲ. ಆದರೆ, ಉದ್ದೇಶಪೂರ್ವಕವಾಗಿ ಅಥವಾ ತನ್ನ ಅಧಿಕಾರದ ಭರದಲ್ಲಿ ಈ ಮಾತುಗಳನ್ನು ಹೇಳಿಕೊಂಡು ಹೋದರೆ ನಾವು ಸಹಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ದಯವಿಟ್ಟು ಅವರು ಈ ಸದನದ ಕ್ಷಮೆಯನ್ನು ಕೇಳಲಿ. ಯಾರೂ ನಾವು ಬೊಗಳಲಿಲ್ಲ, ಇರುವುದನ್ನು ಹೇಳತಕ್ಕಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಪುಸ್ತಕದಲ್ಲಿ ಏನಿತ್ತು, ಪತ್ರಿಕೆಯಲ್ಲಿ ಏನಿತ್ತು, ನಾವು ಏನು ಬರೆದುಕೊಂಡು ಬಂದಿದ್ದೆವು, ಅದನ್ನು ಬಿಟ್ಟು ಬೇರೆ ಏನನ್ನೂ ನಾವು ಓದಲಿಲ್ಲ. ಅದಕ್ಕಾಗಿ, ದಯವಿಟ್ಟು ಅವರಿಗೆ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ಈ ರೀತಿ ವರ್ತನೆ ಮಾಡುವುದು ಬೇಡ ಎಂದು ತಾವು ಅವರಿಗೆ ಆದೇಶ ಕೊಡಬೇಕು ಮತ್ತು ಅವರು ಕ್ಷಮೆಯನ್ನು ಕೇಳಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಯಾವುದೇ ಒಂದು ರಾಜ್ಯದಲ್ಲಿ ಒಂದು ಘಟನೆಯಾದಂಥ ಸಂದರ್ಭದಲ್ಲಿ ಅದನ್ನು ಸದನದ ಗಮನಕ್ಕೆ ತರುವಂಥಾದ್ದು ಮಾನ್ಯ ವಿರೋಧ ಪಕ್ಷದ ನಾಯಕರ ಕರ್ತವ್ಯ. ಆ ಸಂದರ್ಭದಲ್ಲಿ ಈಶ್ವರಪ್ಪನವರು ವಿರೋಧ ಪಕ್ಷದ ನಾಯಕರಿಗೆ ಯಾವ ರೀತಿಯ ಮಾತನ್ನು ಹೇಳಿದರು ಎನ್ನುವುದು ಕಡತದಲ್ಲಿ ಇದೆ. ಅದರ ಜೊತೆಗೆ, ಈಶ್ವರಪ್ಪನವರ ಬಗ್ಗೆ ನನಗೆ ಅಭಿಮಾನ ಇದೆ, ಅವರು ಹಿರಿಯರಿದ್ದಾರೆ. ನಿನ್ನೆ ಅವರು ಒಂದು ಮಾತನ್ನು ಹೇಳಿದರು ಎಂದು ಗೊತ್ತಾಯಿತು. ಏಕೆಂದರೆ, ಆಗ ನಾನೂ ಅದನ್ನು observe ಮಾಡಲಿಲ್ಲ. ಕಡತದಲ್ಲಿದ್ದರೆ ಅದನ್ನು ತೆಗೆಸಬೇಕಾಗುತ್ತದೆ. ಮತ್ತು ಅದಕ್ಕೆ ಅವರು ಕ್ಷಮೆಯನ್ನೂ ಕೇಳಬೇಕಾಗುತ್ತದೆ. ಏಕೆಂದರೆ, ಕುಮಾರಸ್ವಾಮಿಯವರ ರಕ್ತ ಬೇರೆ, ನನ್ನ ರಕ್ತ ಬೇರೆ ಎಂದು ಹೇಳಿದ್ದಾರೆ. ಅಂದರೆ ಅದರ ಅರ್ಥ ಏನು ಎನ್ನುವುದನ್ನು ದಯಮಾಡಿ ತಿಳಿಸಬೇಕು. ಕುಮಾರಸ್ವಾಮಿಯವರು ಮಾತನಾಡುವಾಗ ಆ ರೀತಿ ಅವರು ಹೇಳಿದ್ದು ತಪ್ಪು ಎನ್ನುವ ಭಾವನೆ ನಿಮಗೇನಾದರೂ ಇದ್ದರೆ ಕ್ಷಮೆ ಕೇಳಬೇಕು ಮತ್ತು ಅದನ್ನು ಕಡತದಿಂದಲೂ ತೆಗೆಸಬೇಕು ಎಂದು ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಗಮನಿಸುತ್ತಿದ್ದೇನೆ, ಪ್ರಾರಂಭದಿಂದಲೂ ಅಂದರೆ ಬಜೆಟ್ ಅಧಿವೇಶನದ ಈ ಕಾರ್ಯಕಲಾಪ ಪ್ರಾರಂಭವಾದಾಗಿನಿಂದಲೂ ನಮ್ಮ ನಿರೀಕ್ಷೆ ಮೀರಿ ಪ್ರತಿಪಕ್ಷದ ನಾಯಕರು ನಮಗೆ ಎಲ್ಲ ರೀತಿಯ ಸಹಕಾರವನ್ನು ಕೊಟ್ಟಿದ್ದೀರಿ. ಕಾರ್ಯಕಲಾಪದಲ್ಲಿ ಭಾಗವಹಿಸಿದ್ದೀರಿ. ಅಮೂಲ್ಯವಾದಂಥ ಸಲಹೆಗಳನ್ನು ಕೊಟ್ಟಿದ್ದೀರಿ. ಬಹುಶಃ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿಪಕ್ಷ ಎಷ್ಟು ಬಲವಾಗಿರುತ್ತದೆ, ಈ ಮನೆಯಲ್ಲಿ ಎಷ್ಟು ಚರ್ಚೆಯಾಗುತ್ತದೆ, ಅದರಿಂದ ಅನೇಕ ಲೋಪದೋಷಗಳು ಏನು ನಡೆದಿರುತ್ತವೆ ಅವು ನಮ್ಮ ಗಮನಕ್ಕೂ ಬರುತ್ತದೆ ಮತ್ತು ಅಧಿಕಾರಿಗಳ ಕಿವಿ ಹಿಂಡಿ ಅದನ್ನು ಸರಿಪಡಿಸುವುಕ್ಕೂ ಅನುಕೂಲವಾಗುತ್ತದೆ. ಉನ್ನತ ಅಧಿಕಾರಿಗಳೂ ಕೂಡ ಅದರ ಬಗ್ಗೆ ಗಮನ ಕೊಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ತಾವು ನಡೆದುಕೊಂಡಿದ್ದೀರಿ. ಅದಕ್ಕಾಗಿ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ ಮತ್ತು ಅದು ಅದೇ ರೀತಿ ಮುಂದುವರಿಯಬೇಕೆಂದು ಸದನದಲ್ಲಿ ವಿನಂತಿಯನ್ನು ಮಾಡುತ್ತೇನೆ.

ನಮ್ಮ ಪಕ್ಷದ ಹಿರಿಯ ನಾಯಕಿಯೊಬ್ಬರು ಕೊಟ್ಟ ಹೇಳಿಕೆ ನಿಮಗೆ ವಿವಾದಾಸ್ಪದವಾಗಿ ಕಂಡಿರಬಹುದು. ಅದನ್ನು ಅವರು ಸದನದ ಒಳಗೆ, ಲೋಕಸಭೆಯಲ್ಲಿ ಮಾತನಾಡಿದ್ದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಅಲ್ಲಿ ಜನ ಇದ್ದಾರೆ.

ಆಥವಾ, ಅವರು ಜವಾಬ್ದಾರಿ ಸ್ಥಾನದಲ್ಲಿದ್ದು ಬೇರೆ ಏನಾದರೂ ಮಾತನಾಡಿದ್ದರೂ ಸಹ ಲೋಕಸಭೆಯಲ್ಲಿ ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ, ಚರ್ಚೆಗಳಾಗುತ್ತವೆ. ಅನೇಕ ಸಂದರ್ಭಗಳಲ್ಲಿ ನನ್ನ ಬಗ್ಗೆ, ನಮ್ಮ ಪಕ್ಷದ ಬಗ್ಗೆ, ಈ ಮನೆಯಲ್ಲಿ ಇಲ್ಲದಂಥ ಅನೇಕ ಹಿರಿಯರು ಮಾತನಾಡಿದಂಥ ಮಾತನ್ನು ನಾನು ಎಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಟ್ಟಿಲ್ಲ. ನಾನು ಅದನ್ನು ನುಂಗಿಕೊಂಡಿದ್ದೇನೆ, ಸಹಿಸಿಕೊಂಡಿದ್ದೇನೆ. ಇಲ್ಲಿ ಕುಳಿತಾಗ ನಾವು ಅದನ್ನು ಸಹಿಸಿಕೊಳ್ಳಬೇಕು. ಯಾವುದೋ ಸದನದ ನಡವಳಿಕೆ ಬಗ್ಗೆ ಅಥವಾ ಸದನದ ಹೊರಗೆ ಯಾರೋ ಮಾತನಾಡಿದ ಬಗ್ಗೆ ಇಲ್ಲಿ ಚರ್ಚೆಯಾದರೆ ಅದಕ್ಕೆ ಉತ್ತರ ಯಾರು ಕೊಡುತ್ತಾರೆ? ಈ ಸದನದ ಸತ್ಸಂಪ್ರದಾಯಗಳು, ನಿಯಮಾವಳಿಗಳನ್ನು ಅರಿತಿರುವಂಥ ಮಲ್ಲಿಕಾರ್ಜುನ ಖರ್ಗೆಯವರಂಥ ಅನೇಕ ಹಿರಿಯರು ಇಲ್ಲಿರುವಂಥ ಸಂದರ್ಭದಲ್ಲಿ ಈ ರೀತಿ ಪ್ರಸ್ತಾಪ ಮಾಡಿದರೆ ಅದಕ್ಕೆ ನಾವು ಏನು ಉತ್ತರ ಕೊಡಬೇಕು? ಮೊದಲನೆಯದು, ಯಾವುದೋ ಒಂದು ಪತ್ರಿಕೆಯಲ್ಲಿ ಬಂದಂಥಾದ್ದು, ಅದರಲ್ಲಿ ಯಾವುದೂ ಪೂರ್ಣ ವಿವರವಿಲ್ಲ. ಅಕಸ್ಮಾತ್ ಅದು ಇದೆ ಎನ್ನುವುದಾದರೂ ಅದಕ್ಕೆ ಉತ್ತರವನ್ನು ಲೋಕಸಭೆಯಲ್ಲಿ ಅಥವಾ ಸಂಬಂಧಪಟ್ಟ ಸ್ಥಳದಲ್ಲಿ ಸಂಬಂಧಪಟ್ಟವರು ಕೊಡುತ್ತಾರೆ. ಅದ್ದರಿಂದ, ಪ್ರತಿಪಕ್ಷದಲ್ಲಿ ಕುಳಿತಿರುವಂಥ ಅನುಭವಿ ಹಿರಿಯ ರಾಜಕಾರಣಿಗಳು, ಮುಖಂಡರೂ ಸಹ ಇಂಥ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡದಿದ್ದರೆ ಬಹಳ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ನಾವು ಅದಕ್ಕೆ ಉತ್ತರ ಕೊಡುವ ಸ್ಥಿತಿಯಲ್ಲಿಯೂ ಇಲ್ಲ, ಅದಕ್ಕೆ ನಿಮಗೆ ಪರಿಹಾರವೂ ಸಿಗುವುದಿಲ್ಲ. ಇದು ಪ್ರಸ್ತಾಪವಾದ್ದರಿಂದ, ನಿನ್ನೆ ಸುಮಾರು ಹತ್ತಾರು ಜನ ಸದಸ್ಯರು 2–3 ಗಂಟೆಗಳ ಕಾಲ ಮಾತನಾಡುವಂಥ ಅವಕಾಶಗಳೂ ತಪ್ಪಿಹೋಯಿತು. ಅದಕ್ಕೋಸ್ಕರ ನಾನು ನಮ್ಮ ಪ್ರತಿಪಕ್ಷದ ನಾಯಕರು ಮತ್ತು ಸದಸ್ಯರು ಹಾಗೂ ಈ ಕಡೆ ಕುಳಿತಿರುವಂಥ ನಮ್ಮ ಆಡಳಿತ ಪಕ್ಷದ ಸದಸ್ಯರಿಗೆ ವಿನಂತಿ ಮಾಡುತ್ತೇನೆ, ಯಾವುದೇ ಶಬ್ದಗಳನ್ನು ಉಪಯೋಗಿಸಬೇಕಾದರೆ, ನಮ್ಮನ್ನು ನಾವು ಸಂಯಮದಿಂದ, ಹತೋಟಿಯಲ್ಲಿ ಇಟ್ಟುಕೊಂಡು ಮಾತನಾಡಬೇಕಾಗುತ್ತದೆ. ಕಡತದಲ್ಲೇನಾದರೂ ಅಂಥ ವಿಷಯಗಳಿದ್ದರೆ ಅಧ್ಯಕ್ಷರು ಅದನ್ನು ತೆಗೆದು ಹಾಕುತ್ತಾರೆ. ತೆಗೆದು ಹಾಕಲೇಬೇಕು, ಅದರ ಬಗ್ಗೆ ಎರಡು ಮಾತಿಲ್ಲ. ಈಗ ರೇವಣ್ಣನವರು ಏನೋ ಹೇಳಿದರು. ಆವೇಶದಲ್ಲೇನಾದರೂ ಅಂಥ ಮಾತುಗಳನ್ನು ಹೇಳಿದ್ದರೆ, ಖಂಡಿತವಾಗಿಯೂ ಅಂಥ ವಿಷಯಗಳು ಕಡತದಲ್ಲಿ ಇರಬಾರದು. ಈ ಹಿನ್ನೆಲೆಯಲ್ಲಿ ನೀವು ಸಹಕಾರವನ್ನು ಕೊಟ್ಟರೆ, ನಾವೂ ಸಹ ಸಂಯಮದಿಂದ, ನಿಮಗೆ ಯಾವುದೇ ರೀತಿಯ ನೋವಾಗದ ರೀತಿಯಲ್ಲಿ ನಡೆದುಕೊಳ್ಳುವುಕ್ಕೆ

ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಅಕಸ್ಮಾತ್ ಅಪರೂಪಕ್ಕೆ ಅಂಥ ಘಟನೆಗಳಾಗಬಹುದು. ಈ ಮನೆಯಲ್ಲಿ ಎಂಥೆಂಥ ವಿಷಯಗಳು ಚರ್ಚೆಯಾಗಿವೆ. ದಾಖಲೆಗಳೆಲ್ಲಾ ಇವೆ. ಆದರೆ ಸ್ವಲ್ಪ ಕೊಟ್ಟು ತೆಗೆದುಕೊಳ್ಳುವ ರೀತಿಯಲ್ಲಿದ್ದಂಥ ಮಾತುಗಳಿಗೆ ನಾವು ಯಾರು ತಪ್ಪು ಗ್ರಹಿಕೆಯನ್ನು ಮಾಡಿಕೊಳ್ಳಬಾರದು. ನಿನ್ನೆ ಅನೇಕ ಮಾತುಗಳನ್ನು ಆಡಿದರು. ನಾವೂ ಸಹ ಅವುಗಳನ್ನು ಕೇಳಿಕೊಂಡು ಕುಳಿತಿದ್ದೇವೆ. ನಾವು ಅವುಗಳಿಗ್ಯಾವುದಕ್ಕೂ ಉತ್ತರ ಕೊಡಲಿಲ್ಲ. ನನ್ನ ಮಗನ ಬಗ್ಗೆಯೇ ಬಂದಂಥ ಪ್ರಸ್ತಾಪದ ಮಾತುಗಳಿಗೂ ನಾನು ಒಂದು ಚಕಾರವನ್ನೂ ಎತ್ತಲಿಲ್ಲ. ಜನ ಗಮನಿಸುತ್ತಿರುತ್ತಾರೆ, ಅವರು ನೋಡುತ್ತಾರೆ. ಮತ್ತು ಈ ರೀತಿಯ ವಿಷಯಗಳನ್ನು ಹೊರಗಡೆ, ಚುನಾವಣೆಯ ಸಮಯದಲ್ಲಿ ಮಾಡೋಣ. ಇಲ್ಲಿ ಒಳಗಡೆ ನಾವು ಕುಳಿತಿರುವಂಥವರು ರಾಜ್ಯದ ಹಿತದೃಷ್ಟಿಯಿಂದ ಮಾತನಾಡಬೇಕು. ಆ ರೀತಿ ನೀವು ಒಟ್ಟಾಗಿ ಸಹಕಾರ ಕೊಡುತ್ತಿದ್ದೀರಿ. ಅದೇ ರೀತಿ ಸಹಕಾರ ಕೊಡಿ. ನಾವೂ ಸಹ ಎಲ್ಲ ರೀತಿಯ ಸಹಕಾರವನ್ನು ನಿಮ್ಮಿಂದ ನಿರೀಕ್ಷೆ ಮಾಡುತ್ತೇವೆ, ನಮ್ಮ ಕಡೆಯಿಂದ ಆ ರೀತಿಯ ಲೋಪದೋಷಗಳು ಆಗದಂತೆ ಎಚ್ಚರಿಕೆಯನ್ನು ಸಹ ವಹಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ನಾನು ಹೇಳುವುದು ಇಷ್ಟೇ. ಎಲ್ಲೋ ನಡೆದಂಥ ವಿಚಾರಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಬೇಕು, ಹಠ ಹಿಡಿದು, ಅದಕ್ಕೆ ನಿಮ್ಮಿಂದ ಉತ್ತರ ಬಯಸಬೇಕು ಎಂದು ಇಲ್ಲ. ನಾವು ಅಧ್ಯಕ್ಷರ ಗಮನಕ್ಕೆ ತಂದು, ಅದನ್ನು ಅವರಿಗೆ ಬರವಣಿಗೆಯಲ್ಲಿ ಕೊಟ್ಟು, ಅವರ permission ಕೇಳಿ, ನಮ್ಮ ಪ್ರಾಸ್ತಾವಿಕ ಮಾತನ್ನು ಕೇಳಿದ ಮೇಲೆ, ನೀವು ಈಗೇನು ಹೇಳುತ್ತಿದ್ದೀರಿ ಅದರಂತೆ, ಇದು ಸರಿಯಲ್ಲ, ಮತ್ತು ಇದು ನಮ್ಮ Rulesನಲ್ಲಿ ಬರುವುದಿಲ್ಲ ಎಂದು ತೀರ್ಮಾನ ಕೊಡತಕ್ಕಂಥ ಅಧಿಕಾರ ಅಧ್ಯಕ್ಷರಿಗೆ ಇದೆ. ಆದರೆ ಬೇರೆ ಸದಸ್ಯರು ನಮಗೇ directly ಪೈಪೋಟಿ ಮಾಡಿ ನೀವು ಏನು ಮಾಡುತ್ತೀರಿ ಎಂದು ಕೇಳತಕ್ಕಂಥಾದ್ದಲ್ಲ. ಅಧ್ಯಕ್ಷರು ಒಂದು ಸಾರಿ admit ಮಾಡಿದ ಮೇಲೆ, ಚರ್ಚೆಯಾದ ಮೇಲೆ, ಅದಕ್ಕೆ ನೀವು ಉತ್ತರ ಕೊಡಬಹುದು. ಇಲ್ಲವೆಂದರೆ, ನಮಗೆ ಇದು ಸಂಬಂಧವಿಲ್ಲ, ನಾವು ಉತ್ತರ ಕೊಡುವ ಹಾಗಿಲ್ಲ ಎಂದು ಹೇಳಿ ಕೂರಬಹುದು. ಆದರೆ ಅಧ್ಯಕ್ಷರ ಮನವೊಲಿಸತಕ್ಕಂಥಾದ್ದು, ಅಧ್ಯಕ್ಷರನ್ನು ಕೇಳತಕ್ಕಂಥಾದ್ದು, Rules ನಲ್ಲಿ provision ಇಲ್ಲದಿದ್ದರೂ ಕೂಡ ಅಧ್ಯಕ್ಷರಿಗೆ Rule 363 ಕೆಳಗೆ ಇರುವ residuary powers ಅನ್ನು ನೀವು use ಮಾಡಿ ನಿಮ್ಮ discretion ನಲ್ಲಿ ಮಾಡಬಹುದು ಎನ್ನುವ ಮನವರಿಕೆಯನ್ನು ಮಾಡಿಕೊಡುತ್ತಿದ್ದೇವೆ. ಬೇರೆ ಯಾರಿಗೂ ಅಲ್ಲ. ಅದನ್ನು ನೀವು yes ಅಂದಿದ್ದರೆ, ನಾವು ಮುಂದೆ

ಹೋಗುತ್ತಿದ್ದೆವು. ಇಲ್ಲ, ಆಗುವುದಿಲ್ಲ ಎಂದರೆ, ನಾವು ಅದನ್ನು ಪದೇ ಪದೇ ಕೇಳುವುದಕ್ಕೆ ನಮಗೆ ಹಕ್ಕಿದೆ, repeatedly ನಿಮಗೆ convince ಮಾಡತಕ್ಕಂಥ ಪ್ರಯತ್ನ ಮಾಡತಕ್ಕಂಥ ಅಧಿಕಾರ ನಮಗೆ ನೀವು ಕೋಟ್ಟಿದ್ದೀರಿ. ನಾವು ಎಲ್ಲಿಯವರೆಗೆ ಈ ಮನೆಯ ಸದಸ್ಯರಾಗಿರುತ್ತೇವೋ ಅಲ್ಲಿಯವರೆಗೆ ಅದು ಇರುತ್ತದೆ. ಒಂದೊಂದು ಸಲ ನೀವು ಅಂಥಾದ್ದನ್ನು reject ಮಾಡಿದ ಮೇಲೆ ಒಳ್ಳೆಯದು ಎಂದು ಹೇಳಿ ಅದನ್ನು ಒಪ್ಪಿಕೊಂಡು ಕೂರುತ್ತೇವೆ. ಈಗ ಬಂದಿರುವ ಪ್ರಶ್ನೆ ಅದಲ್ಲ. ಯಾರು ಮಾತನಾಡಿದರು ಎನ್ನುವುದು ಒಂದು ಕಡೆ ಹೋಯಿತು. ಆದರೆ ಚರ್ಚೆಯ ಸಂದರ್ಭದಲ್ಲಿ ಏನೊಂದು ಪದ ಬಳಕೆಯಾಯಿತು ಅದರ ಬಗ್ಗೆ ಹೇಳುತ್ತಿದ್ದೇವೆ. ಅದೇ ರೀತಿ ರೇವಣ್ಣನವರೂ ಹೇಳಿದರು, ನಿಮ್ಮ ತಂದೆ ಬೇರೆ, ತಾಯಿ ಬೇರೆಯೇ? ನಿಮ್ಮಲ್ಲಿ ಒಬ್ಬರು ಹೀಗಿದ್ದೀರಿ, ಒಬ್ಬರು ಹಾಗಿದ್ದೀರಿ ಎಂದು ಹೇಳಿದರು. ಆಗ ಅದನ್ನು ನಾನು ಗಮನಿಸಿದೆ. ನಾನು ಎದ್ದು ನಿಂತು ಅದರ ಬಗ್ಗೆ ಹೇಳಬೇಕೆಂದರೂ, ಸದನದಲ್ಲಿ ಅವರೂ ಇದ್ದಾರೆ, ಅವರ presenceನಲ್ಲಿ ನಾನು ಎದ್ದರೆ ತಪ್ಪು ತಿಳಿದುಕೊಳ್ಳುತ್ತಾರೆ ಎಂದು ನಾನು ಸುಮ್ಮನಾದೆ. ಏತಕ್ಕೆ ಅವರಿಗೆ ಇಂಥ ಪದಗಳೇ ಯೋಚನೆಗೆ ಬರುತ್ತವೆ ಎನ್ನುವುದು ನನಗೆ ಗೊತ್ತಿಲ್ಲ. ನಿಜವಾಗಿಯೂ ಈ ರೀತಿಯಾಗಿ ಆಗಬಾರದು. ಇದರಿಂದ ಏನಾಗುತ್ತದೆಂದರೆ, ನಮ್ಮ ಸತ್ಸಂಪ್ರದಾಯಕ್ಕೆ ಅಡ್ಡಿಯೂ ಬರುತ್ತದೆ, ಏನೋ heated discussion ನಲ್ಲಿ ಒಂದೆರೆಡು ಮಾತನಾಡಿ, ನಂತರ ಕ್ಷಮೆ ಕೇಳಿದರು ಎಂದರೆ ನಡೆಯುತ್ತದೆ, ಪರವಾಗಿಲ್ಲ. ಆದರೆ ಏನೂ ಇಲ್ಲ, ಅವರಿಗೆ ಹಾಗೆ ಅನ್ನುವುದು, ನಮಗೆ ಹೀಗೆ ಅನ್ನುವುದು ಆಗುತ್ತಿದೆ. ಅದಕ್ಕಾಗಿ ಅಧ್ಯಕ್ಷರೆ, ದಯವಿಟ್ಟು ತಾವು ಇದರ ಕಡೆ ಗಮನ ಕೊಟ್ಟು ನೀವು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ, ಮಾನ್ಯ ರೇವಣ್ಣನವರು ಈ ರೀತಿ ಯೋಚನೆ ಮಾಡುತ್ತಾರೆ ಎನ್ನುವ ಕಲ್ಪನೆ ಕೂಡ ನನಗೆ ಇರಲಿಲ್ಲ. ಏಕೆಂದರೆ, ಕುಮಾರಸ್ವಾಮಿ ಮತ್ತು ರೇವಣ್ಣನವರು ಅಣ್ಣ ತಮ್ಮಂದಿರಾದರೂ ಕೂಡ, ಹಿಂದೆ ನಾವೆಲ್ಲರೂ ಅವರ ಜೊತೆಗಿದ್ದಂಥ ಸಂದರ್ಭದಲ್ಲಿ 20 ತಿಂಗಳಲ್ಲಿ ಒಂದು ರೀತಿಯಲ್ಲಿ ನಾವೂ ಅವರ ಜೊತೆ ಅಣ್ಣ ತಮ್ಮಂದಿರ ರೂಪದಲ್ಲೇ ಬೆಳೆದುಕೊಂಡು ಬಂದಿದ್ದೇವೆ. ಅಕಸ್ಮಾತ್ ನಿಮಗೆ ಆ ರೀತಿಯ ಭಾವನೆ ಬಂದಿದ್ದರೆ, ಏಕೆಂದರೆ, ನೀವು ಬಹಳ fast ಆಗಿದ್ದಿರಿ, ಅವರು soft ಆಗಿದ್ದರು,ಎನ್ನುವುದನ್ನು ಹೇಳಲು ದೇವೇಗೌಡರು ಮತ್ತು ಚನ್ನಮ್ಮನವರ ಬಗ್ಗೆ ಹೋಲಿಕೆಯ ರೀತಿಯಲ್ಲಿ ಅದು ಪ್ರಸ್ತಾಪವಾಗಿದೆಯೇ ವಿನಃ ಬೇರೆ ರೀತಿಯಲ್ಲಿ ಅಲ್ಲ. ನಿಮಗೆ ನಾನು ಆ ರೀತಿ

ಏನಾದರೂ ಮಾತನಾಡಿದರೆ, ಆ ರೀತಿ ಯೋಚನೆ ಮಾಡಿದ್ದರೆ, ಅದು ನಮ್ಮ ತಾಯಿಯ ಬಗ್ಗೆಯೇ ನಾನು ಮಾತನಾಡಿಕೊಂಡ ಹಾಗೆ ಆಗುತ್ತದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ದಯವಿಟ್ಟು ಆ ರೀತಿಯ ಯೋಚನೆಯನ್ನೇ ಮಾಡಬೇಡಿ. ಆ ರೀತಿಯ ಯೋಚನೆ ನಿಮಗೆ ಬಂದಿದ್ದರೆ, ನನ್ನ ಕಡೆಯಿಂದ ತಪ್ಪಾಗಿದ್ದರೆ ನೂರಕ್ಕೆ ನೂರರಷ್ಟು, ನಾನು ಎಷ್ಟು ಬೇಕಾದರೂ ಕ್ಷಮೆ ಕೇಳಲು ತಯಾರಿದ್ದೇನೆ. ಇದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ. ಏಕೆಂದರೆ, ಖರ್ಗೆಯವರು ಹೇಳುತ್ತಿರುವಂಥ ವಿಷಯವಾದರೆ ಅದು ರಾಜಕಾರಣ. ಆದರೆ ಇದು ವೈಯಕ್ತಿಕ. ಅವರ ಬಗ್ಗೆ ವೈಯಕ್ತಿಕವಾಗಿ ಮಾತನಾಡಲು ನಾನ್ಯಾರು? ಅದು ಬೇಡ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ನಾನು speaker chamberನಲ್ಲಿ ಕುಳಿತಿದ್ದಾಗ, ನಮ್ಮ ಸ್ನೇಹಿತರಾದ ಜನತಾದಳದ ಸದಸ್ಯರೊಬ್ಬರು, ಬಹುಶಃ ಪುಟ್ಟೇಗೌಡರು ಇರಬಹುದು, ಅವರು ಅಲ್ಲಿ ಬಂದು ಇದನ್ನು ಪ್ರಸ್ತಾಪ ಮಾಡಿದರು, "ಅಣ್ಣಾ, ನೀವು ಈ ರೀತಿ ಅಂದಿದ್ದೀರಾ" ಎಂದು ಕೇಳಿದರು. ಅದನ್ನು ಕೇಳಿ ನನಗೆ ಗಾಬರಿಯಾಯಿತು. ನನಗೆ ಆ ರೀತಿ ಯೋಚನೆ ಮಾಡುವುದಕ್ಕೂ ಬರುವುದಿಲ್ಲ. ಏಕೆಂದರೆ ಒಬ್ಬರು fast,ಒಬ್ಬರು slow ಇದ್ದರಲ್ಲ ಎನ್ನುವ ಕಾರಣಕ್ಕೋಸ್ಕರ ದೇವೇಗೌಡರು ಮತ್ತು ಚನ್ನಮ್ಮನವರಿಗೆ ಹೋಲಿಕೆ ಮಾಡಲು ಪ್ರಯತ್ನ ಮಾಡಿದ್ದೇನೆಯೇ ವಿನಾ ದಯವಿಟ್ಟು ಯಾವುದೇ ಕಾರಣಕ್ಕೂ ಆ ರೀತಿಯ ಯೋಚನೆಯೂ ಸಹ ನನಗೆ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವ ವಿಷಯವನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆ ರೀತಿ ಏನಾದರೂ ಅಂದಿದ್ದರೆ, ಅಧ್ಯಕ್ಷರೆ, ನಾನೇ ಹೇಳುತ್ತೇನೆ, ದಯವಿಟ್ಟು ಅದನ್ನು ಕಡತದಿಂದ ತೆಗೆದು ಹಾಕಿ, ಮತ್ತು ನಿಮಗೆ ಆ ರೀತಿಯ ಭಾವನೆ ಬಂದಿದ್ದರೆ ಈ ಬಗ್ಗೆ 10 ಬಾರಿಯಾದರೂ ನಾನು ಕ್ಷಮೆ ಕೇಳುವುದಕ್ಕೆ ತಯಾರಿದ್ದೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ರಾಜ್ಯದಲ್ಲಿ ಹಿರಿಯ ರಾಜಕಾರಣಿಗಳು. ಅವರು ರಾಜಕಾರಣ ಮಾಡುತ್ತಿರುವಂಥ ಸಂದರ್ಭದಲ್ಲಿ ನನ್ನಂಥ ಸಾವಿರ ಜನರು ಬಂದರೂ ಅವರು ಯಾವ ದಾರಿಯಲ್ಲಿ ಹೋಗುತ್ತಿದ್ದಾರೆ ಎನ್ನುವುದನ್ನು ನೋಡುತ್ತಿರುತ್ತಾರೆ. ಆದರೆ ಇಲ್ಲಿ ಪ್ರಸ್ತಾಪ ಬಂದಿದ್ದು ಏನೆಂದರೆ, ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಹೊರಗಡೆ ಹೇಳಿಕೆ ಮಾಡಿದ್ದನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ, ನಾವು ಹತ್ತು ಬಾರಿ ಅವರಿಗೆ ಹೇಳಿದೆವು, ಇದು ಬೇಡ, ಇದನ್ನು ಇಲ್ಲಿ ತರುವುದಲ್ಲ, ಅವರು ಹೊರಗಡೆಯವರು ಎಂದು ಹೇಳಿದೆವು. ಅಧ್ಯಕ್ಷರಿಗೆ notice ಕೊಟ್ಟಿದ್ದಾರೆ, ನಿಮ್ಮ ಗಮನಕ್ಕೆ ತಂದಿದ್ದಾರೆ, ಎಲ್ಲವೂ ಸರಿ. ಇಡೀ ವಿಷಯ ಏನೇನು ನಡೆದಿದೆ ನೀವು ಕಡತದಲ್ಲಿ ನೋಡಿ. ಎಲ್ಲೂ ಕೂಡ ನಾವು ಪ್ರಸ್ತಾಪವನ್ನು ಮಾಡಲಿಲ್ಲ. ನೀವು ಅವರ ಮಾತನ್ನು ಕಡತದಿಂದ ತೆಗೆಸಿ ಹಾಕಿದಿರಿ. ಸಭಾಧ್ಯಕ್ಷರು

ವಿರೋಧ ಪಕ್ಷದ ನಾಯಕರ ಮಾತನ್ನು ಕಡತದಿಂದ ತೆಗೆದು ಹಾಕಿಸಿದಿರಿ. ನೀವೇ ಅದನ್ನು ಕಡತದಿಂದ ತೆಗೆದು ಹಾಕಿರಬೇಕಾದರೆ ಅವರು ನಮ್ಮ ಕರ್ನಾಟಕ ರಾಜ್ಯದ ಮತ್ತು ಇಡೀ ದೇಶದಲ್ಲಿ ಅವರು ನಮಗೆ ನಾಯಕಿ ಶ್ರೀಮತಿ ಸುಷ್ಮಾ ಸ್ವರಾಜ್‌ರವರು. ಅವರ ಬಗ್ಗೆ ಇವರು ಆಡಿದಂಥ ಮಾತನ್ನು ನೀವು ಕಡತದಿಂದ ತೆಗೆದು ಹಾಕಬೇಕಾದರೆ ಆ ಪಕ್ಷದಲ್ಲಿದ್ದಂಥ ಕಾರ್ಯಕರ್ತರಿಗೆ ಇಡೀ ಕರ್ನಾಟಕ ರಾಜ್ಯದಲ್ಲಿರುವ ನಮಗೆ ಏನು ಅನಿಸುತ್ತದೆ? ಹಾಗಾದರೆ ನಮಗೆ ಭಾವನೆಗಳು ಇಲ್ಲವೆ? ನಾವು ಮನುಷ್ಯರಲ್ಲವೆ? ಹಾಗಾದರೆ ರಾಜಕಾರಣದಲ್ಲಿ ಯಾರು ಯಾರ ಬಗ್ಗೆ ಏನು ಬೇಕಾದರೂ ಮಾತನಾಡಬಹುದೇ? ಒಬ್ಬ ವಿರೋಧ ಪಕ್ಷದ ನಾಯಕರು..ನಾನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ please ಅವರು conclude ಮಾಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನನ್ನನ್ನು ತಮ್ಮ ಕೊಠಡಿಗೆ ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರು ಮತ್ತು ತಾವು ಕರೆಸಿದಿರಿ. ಈ ವಿಚಾರವಾಗಿ ನೀವು ಪ್ರಸ್ತಾಪ ಮಾಡಿದಿರಿ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದು ಇಷ್ಟೆ. ಏಕೆಂದರೆ ವಿರೋಧ ಪಕ್ಷದ ನಾಯಕರು ನಮ್ಮ ನಾಯಕರ ಬಗ್ಗೆ ಪ್ರಸ್ತಾಪ ಮಾಡಿದ್ದನ್ನು ತಾವು ಕಡತದಿಂದ ತೆಗೆಸಿದ್ದೀರೋ ಇಲ್ಲವೋ ನೋಡಿ. ತಾವು ಕಡತದಿಂದ ತೆಗೆಸಿದ ನಂತರ ಇಡೀ ಕರ್ನಾಟಕ ರಾಜ್ಯದಲ್ಲಿ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ. ಅವರು ಶ್ರೀಮತಿ ಸುಷ್ಮಾ ಸ್ವರಾಜ್‌ರವರ ಬಗ್ಗೆ ಏನು ಅಂದರು, ಅದರ ಬಗ್ಗೆ ನಾನು ಏನು ರಿಯ್ಯಾಕ್ಟ್ ಮಾಡಿದೆ ಅದು ಬಂದಿದೆ. ಹಾಗಾಗಿ ಇದರ ಬಗ್ಗೆ ನಾನು ಹೇಳುವುದಕ್ಕೆ ಹೊರಟಿರುವುದು. ಅವರಿಗೆ ಹೋಲಿಸಿದಾಗ ನಾನು ಇನ್ನು ಕಿರಿಯವನು. ನಾನು ಇಡೀ ಸದನದ ಎಲ್ಲಾ ಸದಸ್ಯರು ಏನೇನು ಮಾತನಾಡಿದ್ದಾರೆ ಎಲ್ಲರೂ ಈ ರೀತಿ ಬೊಗಳಿದ್ದಾರೆ ನನ್ನ ಬಾಯಿಂದ ಅದು ಬಂದಿಲ್ಲ ಬರುವುದೂ ಇಲ್ಲ. ಅವರ ಮಾತನ್ನು ನೀವು ಏನು ಕಡತದಿಂದ ತೆಗೆಸಿದಿರಿ, ಏಕೆ ಏನು ತೆಗೆಸಿದಿರಿ ಎಂದು ಅವರು ಕೇಳಿದರು. ಅದಕ್ಕೆ ನೀವು ಏನು ಬೊಗಳಿದ್ದೀರಿ ಅದನ್ನು ತೆಗೆಸುತ್ತಿದ್ದಾರೆ ಎಂದು ಹೇಳಿದೆ. ನನಗೂ ನೋವಾಗುತ್ತದೆ ನಮ್ಮ ನಾಯಕರ ಬಗ್ಗೆ ಬಂದಾಗ ಅದಕ್ಕೋಸ್ಕರ ಈ ವೇದಿಕೆಯಲ್ಲಿ ಹೇಳುವುದು ಇಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:ಇದು privilege ತನ್ನಿ ಬೊಗಳಿದರು ಎಂದರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ದೊಡ್ಡವರು ಇದ್ದೀರಿ ನಿಮ್ಮ ಬಗ್ಗೆ ನಾನು privilege ತರುವುದಿಲ್ಲ. ನನಗೆ ನೀವು ನಮ್ಮ ನಾಯಕರ ಬಗ್ಗೆ ಮಾತನಾಡಿದಾಗ ಇಲ್ಲಿ ಬಂದು ಕೂಡುವುದಕ್ಕೆ ನನಗೆ ನನ್ನ ಪಕ್ಷ ಕಾರಣ. ನಾನು ನನ್ನ ಸ್ವಂತ ಶಕ್ತಿಯ ಮೇಲೆ ಬಂದಿಲ್ಲ. ನನ್ನ ಪಕ್ಷದ ನಾಯಕರಿಗೆ

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ please.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕರ್ನಾಟಕ ರಾಜ್ಯದಲ್ಲಿ ಹಿರಿಯ ರಾಜಕಾರಣಿಗಳು. ಅಂತಹ ಹಿರಿಯ ರಾಜಕಾರಣಿಗಳಿಗೆ ಅವರು ಒಳ್ಳೆಯ ದಾರಿಯಲ್ಲಿ ಹೋಗುತ್ತಿರುವಂಥ ಸಂದರ್ಭದಲ್ಲಿ ಅದನ್ನು ನಮ್ಮಂಥ ಕಿರಿಯವರು ಅದನ್ನು ಮಾರ್ಗದರ್ಶನವೆಂದು ಭಾವಿಸುತ್ತೇವೆ. ಅವರು ನಮ್ಮ ರಾಷ್ಟ್ರೀಯ ನಾಯಕಿಯವರ ಬಗ್ಗೆ ಹೇಳಿದಾಗ ನನಗೆ ನೋವಾಯಿತು. ಅದಕ್ಕೆ ನಾನು ರಿಯ್ಯಾಕ್ಟ್ ಮಾಡಿದ್ದು ಹೌದು. ನನ್ನ ಮಾತಿನಿಂದ ಅವರಿಗೆ ಏನಾದರೂ ನೋವಾಗಿದ್ದರೆ, ಅವರು ಹಿರಿಯರು ನನ್ನಂಥ ಅನೇಕರನ್ನು ಅವರು ನೋಡಿದ್ದಾರೆ, ನಾನು ಹೇಳುತ್ತೇನೆ, ಅವರಿಗೆ ನೋವು ಮಾಡಬೇಕು ಎನ್ನುವಂಥದ್ದು ಖಂಡಿತ ನನ್ನ ಉದ್ದೇಶ ಅಲ್ಲ. ನನಗೆ ನೋವಾಗಿರುವ ಸಂದರ್ಭದಲ್ಲಿ ನಾನು ರಿಯ್ಯಾಕ್ಟ್ ಮಾಡಿದ್ದು ಹೌದು. ಅವರ ನೋವನ್ನು ನಾನು ಈ ಸಂದರ್ಭದಲ್ಲಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಇದರಲ್ಲಿ ನಾನೇನು ಹಿಂದೆ ಮುಂದೆ ನೋಡುವವನು ಅಲ್ಲ. ನಾನು ಅವರಿಗಿಂತ ದೊಡ್ಡವನಲ್ಲ. ನಾನು ಖಂಡಿತ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಎಸ್, ಈಶ್ವರಪ್ಪ: ಅವರು ಮತ್ತೆ ಮುಂದುವರೆಸುತ್ತೇನೆಂದರೆ ನನ್ನದೇನೂ ಅಭ್ಯಂತರವಿಲ್ಲ. ನಾನು ಮತ್ತೆ ಮುಂದುವರೆಸಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಮುಂದುವರೆಸುವುದಿಲ್ಲ. ನಿಮ್ಮ ರೆಕಾರ್ಡ್ ಸರಿಯಾಗಲಿ.

ಶ್ರೀ ಕೆ.ಎಸ್. ಈಶ್ವರಪ್ಪ: ಅವರು ರೆಕಾರ್ಡ್ ಮಾಡುವಾಗ ಅದನ್ನು ಸರಿ ಮಾಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ: ನಿನ್ನೆ ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು..

(ಗೊಂದಲ)

ಅಧ್ಯಕ್ಷರು: ಮುಗಿಸಿ ಬಿಡಿ.

ಶ್ರೀ ಟಿ.ಬಿ. ಜಯಚಂದ್ರ: ಅವರು ಅವರ ಬಗ್ಗೆ ಯಾವುದೇ ರೀತಿಯ ಟೀಕೆಯನ್ನು ಮಾಡದಿದ್ದಾಗ ತಾವು ಏಕೆ ಕಡತದಿಂದ ತೆಗೆದು ಹಾಕಿದಿರಿ ಎಂದರೆ...

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಏಕೆ ತೆಗೆದು ಹಾಕಿದಿರಿ ಎಂದು ಅದರ ಬಗ್ಗೆ ಅವರನ್ನು ಕೇಳಿ.

ಶ್ರೀ ಟಿ.ಬಿ. ಜಯಚಂದ್ರ: ಅವರು ತಪ್ಪು ಮಾತನಾಡುತ್ತಿದ್ದಾರೆಂದು ಅದನ್ನು ತೆಗೆದು ಹಾಕಲಿಲ್ಲ. ನಾವು ಶ್ರೀಮತಿ ಸುಷ್ಮಾ ಸ್ವರಾಜ್‌ರವರ ಬಗ್ಗೆ ಅಗೌರವವಾಗಿ ಇರತಕ್ಕಂಥ ಮಾತನ್ನು ಆಡಲಿಲ್ಲ..

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಹೇಳಿದ ಪದ ಅದನ್ನೇ ಅವರು ಬಳಸಿದ್ದಾರೆ. ಶ್ರೀಮತಿ ಸುಷ್ಮಾ ಸ್ವರಾಜ್‌ರವರ ಬಗ್ಗೆ ಕ್ಷಮೆ ಕೇಳಿ...(ಗೊಂದಲ) ಅದನ್ನು ಕಡತದಿಂದ ತೆಗೆಸಿ ಹಾಕಿ. ಆದರೆ ಅವರು ನಮ್ಮ ನಾಯಕಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಲ್ಲದಿದ್ದರೆ ನಾನು ಅದನ್ನು ಕೇಳುತ್ತಿರಲಿಲ್ಲ, ಅದನ್ನೂ ಹೇಳುತ್ತೇನೆ. (ಗೊಂದಲ)

ಅಧ್ಯಕ್ಷರು: ಆ ರೀತಿ ಯಾವುದಾದರೂ ಪದಗಳು ಇದ್ದರೆ ಅದನ್ನು ಕಡತದಿಂದ ಈಗಾಗಲೇ ತೆಗೆದು ಹಾಕಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಮಾತನಾಡುವುದು ಆದ ಮೇಲೆ ತಾವು ಮಾತನಾಡಬಹುದು. ನಾವು ಮಾತನಾಡುವಾಗ ನೀವು ಮಾಡನಾಡುತ್ತೀರಿ ಇದೇ ಬಂದಿರುವುದು problem. ದಯಮಾಡಿ ನಾನು ಹೇಳುತ್ತೇನೆ. ಅವರು ಯಾವುದೇ ಕಾರಣದಲ್ಲೂ ಕೂಡ ಶ್ರೀಮತಿ ಸುಷ್ಮಾ ಸ್ವರಾಜ್‌ರವರ ಬಗ್ಗೆ ಅತ್ಯಂತ ಗೌರವದಿಂದ ಮಾತನಾಡಿದರು. ಅವರು ಹೇಳಿದಂಥ ಹೇಳಿಕೆಯನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟರು ವಿನಾ ಅಷ್ಟಕ್ಕೇ ಇವರು ಮೇಲೆ ಬಿದ್ದು ಬಿಟ್ಟರು. ಅದಕ್ಕೋಸ್ಕರ ಅವರು ಅವಹೇಳನವಾಗಿ ಮಾಡನಾಡಿದರು ಎಂದು ಬರುವುದು ಅದು ಸರಿಯಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಅವರು ಮಾಡನಾಡಿರುವುದನ್ನು ಅಧ್ಯಕ್ಷರು ಕಡತದಿಂದ ತೆಗೆಸಿ ಹಾಕಿದ್ದಾರೆ.

ಅಧ್ಯಕ್ಷರು: ಆಯಿತು, ತೆಗೆಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸರ್, ನಿನ್ನೆ ಏನೋ ಚರ್ಚೆಯಾಯಿತು. ಮಾತಿಗೆ ಮಾತು ಬಂತು. ಒಬ್ಬ

ಪ್ರತಿಪಕ್ಷದ ನಾಯಕರಾಗಿ ನೀವೆಲ್ಲಾ ಬಂದು ಅಧ್ಯಕ್ಷರ ಹತ್ತಿರ ಮಾತನಾಡಿದಿರಿ. ಏನು ಸಂದರ್ಭ ಬಂತು ಎಂದು ಅವರು ಹೇಳಿಬಿಟ್ಟು ಅವರು ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದ ಮೇಲೆ, ಮತ್ತೆ ಇದನ್ನು ಬೆಳೆಸಿಕೊಂಡು ಹೋಗುವುದಕ್ಕೆ ಇದರಲ್ಲಿ ಅರ್ಥ ಏನಿದೆ? ದಯಮಾಡಿ ಇದನ್ನು ಮುಗಿಸೋಣ. ಏಕೆಂದರೆ ಈ ಮನೆಯಲ್ಲಿ ಅನೇಕ ಸಂದರ್ಭದಲ್ಲಿ ಏನೇನೋ ಚರ್ಚೆಗಳಾಗಿವೆ. ಚರ್ಚೆಗಳು ಆದಾಗ ಕಡತದಿಂದಲೂ ತೆಗೆಸಿ ಹಾಕಿದ್ದಾರೆ. ಒಂದು ಸಲ ವಿಷಾದವನ್ನು ವ್ಯಕ್ತಪಡಿಸಿದಾಗ ಅದನ್ನು ಮುಗಿಸಿ ಮುಂದು ಹೋಗಿದ್ದೇವೆ. ಯಾವ ಸಂದರ್ಭದಲ್ಲಿ ಹಾಗೆ ಮಾತನಾಡಬೇಕಾಗಿ ಬಂತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಂಥ ಹಿರಿಯರಿಗೆ ನೋವಾಗಿದೆ ಅದಕ್ಕೆ ಅವರು ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದ್ದಾರೆ. ಅದಕ್ಕಾಗಿ ದಯಮಾಡಿ ಇದನ್ನು ಮುಗಿಸಿ ಮುಂದಿನ ಚರ್ಚೆಗೆ ಹೋಗೋಣ. ದಯವಿಟ್ಟು ಇದನ್ನು ಬೆಳೆಸುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಲಂಬಿಸಿಕೊಂಡು ಹೋಗುವುದಿಲ್ಲ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ಇಲ್ಲಿಗೆ ಸಮಾಪ್ತಿ ಮಾಡುವುದನ್ನು ಮಾಡೋಣ. ಆದರೆ ಒಂದು ಏನೆಂದರೆ, ನೀವು ನನ್ನ ಮಾತನ್ನು ಕಡತದಿಂದ ತೆಗೆಸಿ ಹಾಕಿದ್ದು ಏಕೆಂದರೆ, ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಈ ಮನೆಯ ಸದಸ್ಯರು ಅಲ್ಲ, ಅವರ ಬಗ್ಗೆ ಇಲ್ಲಿ ಚರ್ಚೆ ಮಾಡತಕ್ಕಂಥದ್ದು ಇಲ್ಲಿ ಏನೂ ಅವಶ್ಯಕತೆ ಇಲ್ಲ, ಈ ಹಿಂದೆ ಕೂಡ ಅನೇಕ ನಾಯಕರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದಾಗ ನಾವು ಅವಕಾಶ ಮಾಡಿಕೊಟ್ಟಿಲ್ಲ. ಅದಕ್ಕಾಗಿ ಇದನ್ನು ಕಡತದಿಂದ ತೆಗೆಯಿರಿ ಎಂದು ಹೇಳಿ ತೆಗೆಸಿದ್ದು. ಅದು unparliamentay ಏನು? ಈಗ ನಾವು ಮಾತನಾಡಿದೆವು ನನಗೆ ನೋವಾಯಿತು ಅದಕ್ಕೆ ಅವರು ಏನೇನೋ ಹೇಳಿಕೊಂಡು ಚಾಲೆಂಜ್ ಮಾಡಿಕೊಂಡು ಮತ್ತೆ ನಾನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆಂದು ನಾನು ಮಾಡುತ್ತೇನೆ ಇಲ್ಲದಿದ್ದರೆ ನಾನು ಹೀಗೆ ಹೇಳುವುದು ಎನ್ನುವ ಧಾಟಿಯಲ್ಲಿ ಹೇಳಿದರೆ ನನಗೂ ಅಷ್ಟೆ ಸ್ವಾಭಿಮಾನ ಇದೆ. ನಾನು 40 ವರ್ಷದಿಂದ ರಾಜಕಾರಣದಲ್ಲಿದ್ದೇನೆ, ಆ ಜಾಗದಲ್ಲಿ ಕುಳಿತಿರುವಂಥ ದೊಡ್ಡ ದೊಡ್ಡವರನ್ನು ನಾನು ನೋಡಿದ್ದೇನೆ. ಸಣ್ಣವರಿಗೆ ಅಷ್ಟೆ ಅಲ್ಲ, ನನಗಿಂತಲೂ ಹಿರಿಯರನ್ನು ನನಗಿಂತಲೂ ಎತ್ತರವಾದ ಜನರನ್ನು ನೋಡಿದ್ದೇನೆ, ಇಲ್ಲಿ ಎದುರಿಸಿದ್ದೇನೆ. ಅಂತಹ ಅನೇಕ ಸಂದರ್ಭ ಬಂದಾಗ ನಾನು ಏನು ಮಾಡಬೇಕು ಅಧನ್ನು ಮಾಡಿ ಕೂಡ ತೋರಿಸಿದ್ದೇನೆ. ಅದಕ್ಕೆ ದಯವಿಟ್ಟು (ಗೊಂದಲ) ಅದಕ್ಕಾಗಿ ಸ್ವಾಭಿಮಾನಕ್ಕೆ ಧಕ್ಕೆ ತರತಕ್ಕಂಥ ರೀತಿಯಲ್ಲಿ ಮಾತನಾಡಿದರೇ ದಯವಿಟ್ಟು ಅಧ್ಯಕ್ಷರೆ, ಅದನ್ನು ಯಾರೂ ಸಹಿಸುವುದಿಲ್ಲ. ನೀವು ಹೇಳಿದ್ದೀರಿ ಅದಕ್ಕೆ

ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಬಂದಿದ್ದಾರೆ. ಆದರೆ ಯಾರೂ ಕೂಡ ನಮ್ಮ ಸ್ವಾಭಿಮಾನವನ್ನು ಕೆಣಕಿದರೆ ಅದು ಸರಿ ಹೋಗುವುದಿಲ್ಲ, ಅದಕ್ಕೆ ನಾವು ಸುಮ್ಮನೆ ಕೂಡುವುದಕ್ಕೆ ಬಂದಿಲ್ಲ. ದಯವಿಟ್ಟು ಇದಕ್ಕೆ ಮುಕ್ತಿ ಮಾಡಿಸಿ, ಅವರು ವಿಷಾದವೆಂದು ಹೇಳಿಕೊಂಡಿದ್ದಾರೆ, ನಾನು ಅದನ್ನು ಮುಂದುವರೆಸುವುದಿಲ್ಲ.

ಅಧ್ಯಕ್ಷರು: ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಮಾನ್ಯ ಬಾಲಕೃಷ್ಣರವರೆ ಒಂದು ನಿಮಿಷ. ಪತ್ರಕಾ ಮಿತ್ರರು ಸದನದ ನಡವಳಿಕೆಯಲ್ಲಿ ಕಡತದಿಂದ ತೆಗೆದು ಹಾಕಿದ ಪದಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿರುವುದನ್ನು ನಾನು ಗಮನಿಸಿದ್ದೇನೆ. ಈ ರೀತಿ ಇನ್ನು ಮುಂದೆ ಆಗದಂತೆ ಪತ್ರಿಕೆಯವರು ಹಾಗೂ ಪತ್ರಿಕಾ ಮಾಧ್ಯಮದವರು ಮತ್ತು ಇತರರು ಎಚ್ಚರಿಕೆಯನ್ನು ವಹಿಸಬೇಕೆಂದು ಕೋರುತ್ತೇನೆ. ಅಲ್ಲದೆ, ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಬಂದು ಪ್ರತಿಭಟಿಸುತ್ತಿರುವ ಸಂದರ್ಭದಲ್ಲಿ ಅವರು ಉಚ್ಚರಿಸಿದ ಯಾವುದೇ ಪದಗಳು ಕಡತಕ್ಕೆ ಸೇರದೇ ಇರುವುದರಿಂದ ಅವುಗಳನ್ನೂ ಕೂಡ ಪ್ರಕಟಿಸಬಾರದೆಂದು ನಾನು ಈ ಮೂಲಕ ಕೋರುತ್ತೇನೆ.

3.ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 15(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2007ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಕಾರ್ಯದರ್ಶಿ (ಕರ್ನಾಟಕ ವಿಧಾನಸಭೆ): ಮಾನ್ಯ ಅಧ್ಯಕ್ಷರೆ, 12ನೇ ವಿಧಾನಸಭೆಯ ಸಾರ್ವಜನಿಕ ಉದ್ದಿಮೆಗಳ ಸಮಿತಿಯ 116ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995 ಕರ್ನಾಟಕ ಅಧಿನಿಯಮ-1) 145 (4)ರ ಪ್ರಕರಣದ ಮೇರೆಗೆ: